# ಕಲಿಕಾ ಚೇತರಿಕೆ 2022–23

# ನೈದಾನಿಕ ಅವಲೋಕನ– ಕಲಿಕಾಫಲಗಳು

**ತರಗತಿ:–4** **ವಿಷಯ:–ಕನ್ನಡ**

| ಕ್ರ.ಸಂ | ಕಲಿಕಾಫಲಗಳು |
|---|---|
| **1.** | ➢ ಸರಳ ಮೌಖಿಕ ಸೂಚನೆಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ ಹಾಗೂ ಪಾಲಿಸುತ್ತಾರೆ. |
| **2** | ➢ ತಮ್ಮ ಅನುಭವಗಳನ್ನು ಬರೆವಣಿಗೆಯಲ್ಲಿ ಮತ್ತು ಮೌಖಿಕವಾಗಿ ಕೆಲವು ಸಾಲುಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಾಗುತ್ತದೆ. |
| **3** | ➢ ಎಲ್ಲ ಅಕ್ಷರಗಳನ್ನು ಗುರುತಿಸಿ ಪದ ರಚನೆಯ ಸಾಮರ್ಥ್ಯ ಹಾಗೂ ಅವುಗಳನ್ನು ಓದುವ ಸಾಮರ್ಥ್ಯ ಗಳಿಸಿಕೊಳ್ಳುತ್ತಾರೆ. |
| **4** | ➢ ಪರಿಚಿತವಾದ ಶಬ್ದಗಳು, ಹೆಸರುಗಳನ್ನು ಕವಿತೆ, ಕಥೆ, ಬೋರ್ಡ್, ಶಬ್ದದ ಕಾರ್ಡಿನಲ್ಲಿ ಗುರುತಿಸುವ ಸಾಮರ್ಥ್ಯ ಹಾಗೂ ಅದನ್ನು ನಿರರ್ಗಳವಾಗಿ ಓದುವ ಸಾಮರ್ಥ್ಯ ಸಾಧಿಸುತ್ತಾರೆ. |

# ಕಲಿಕಾ ಚೇತರಿಕೆ 2022–23

# ನೈದಾನಿಕ ಅವಲೋಕನ–ಕಲಿಕಾಫಲಗಳು

**ತರಗತಿ: 5** **ವಿಷಯ:–ಕನ್ನಡ**

| ಕ್ರ.ಸಂ | ಕಲಿಕಾಫಲಗಳು |
|---|---|
| 1. | ಇನ್ನೊಬ್ಬರು ಆಡುವ ಮಾತುಗಳನ್ನು ಧ್ಯಾನಪೂರ್ವಕವಾಗಿ ಆಲಿಸಿ ಪ್ರತಿಕ್ರಿಯೆ ನೀಡುತ್ತಾರೆ ಮತ್ತು ಪ್ರಶ್ನೆಗಳನ್ನು ಕೇಳುತ್ತಾರೆ. |
| 2 | ಕಥೆ, ಕವಿತೆ ಮತ್ತು ಬೇರೆ ವಸ್ತು–ವಿಷಯಗಳನ್ನು ತನ್ನದೇ ರೀತಿಯಲ್ಲಿ ಮತ್ತು ಭಾಷೆಯಲ್ಲಿ ಹೇಳುತ್ತಾ ಅದರಲ್ಲಿ ತನ್ನದೇ ಸ್ವಂತದ ಕಥೆ ವಿಷಯಗಳನ್ನು ಜೋಡಿಸುತ್ತಾರೆ |
| 3 | ಓದಿದ ವಿಷಯ ವಸ್ತು ಮತ್ತು ತಮಗೆ ದೈನಂದಿನ ಜೀವನದಲ್ಲಿ ಸ್ವತಃ ಆದ ಅನುಭವಗಳನ್ನು ಸೇರಿಸಿ ಅವುಗಳಿಂದ ಉಂಟಾದ ಸಂವೇದನಾತ್ಮಕ ವಿಚಾರಗಳನ್ನು ಮೌಖಿಕವಾಗಿ ಅಥವಾ ಲಿಖಿತವಾಗಿ ಅಭಿವ್ಯಕ್ತಿಸುತ್ತಾರೆ. (ಆಡುಭಾಷೆ ಅಥವಾ ಗ್ರಾಂಥಿಕ ಭಾಷೆ) |
| 4 | ಸ್ತರಕ್ಕನುಸಾರವಾಗಿ ಬೇರೆ ವಿಷಯಗಳು, ವ್ಯಕ್ತಿಗಳು, ಕಲೆಗಳು ಮುಂತಾದವು (ಉದಾ: ಗಣಿತ, ವಿಜ್ಞಾನ, ಸಾಮಾಜಿಕ ಅಧ್ಯಯನ, ನೃತ್ಯ, ಕಲೆ, ಚಿಕಿತ್ಸೆ ಮುಂತಾದವು) ಗಳಲ್ಲಿ ಪ್ರಯೋಗಿಸಿರುವ ಶಬ್ದಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. |
| 5 | ವಿವಿಧ ಪರಿಸ್ಥಿತಿ ಮತ್ತು ಉದ್ದೇಶಗಳಿಗೆ (ಸೂಚನಾ ಫಲಕದಲ್ಲಿ ಹಾಕುವ ಸೂಚನೆಗಳು, ವಸ್ತುಗಳ ಪಟ್ಟಿ, ಕಥೆ, ಕವಿತೆ, ಪತ್ರ, ಪ್ರಬಂಧ) ಮುಂತಾದವುಗಳ ಅನುಸಾರವಾಗಿ ಬರೆಯುತ್ತಾರೆ. |
| 6 | ವಿವಿಧ ಸಾಹಿತ್ಯಗಳನ್ನು ಪರಸ್ಪರ ಕೇಳಲು, ಓದಲು ಮತ್ತು ಅವುಗಳ ಮೇಲೆ ತಮ್ಮ ಅನಿಸಿಕೆ ನೀಡಲು ಅವುಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಸೇರಿಸಲು, ವಿಸ್ತರಿಸಲು ಸಮರ್ಥರಾಗುತ್ತಾರೆ ಮತ್ತು ಬೇರೆ ಬೇರೆ ವಿಧಾನದಲ್ಲಿ ಬರೆಯುತ್ತಾರೆ. |

# ಕಲಿಕಾ ಚೇತರಿಕೆ 2022–23

# ನೈದಾನಿಕ ಅವಲೋಕನ–ಕಲಿಕಾಫಲಗಳು

**ತರಗತಿ: 6** **ವಿಷಯ:–ಕನ್ನಡ**

| ಕ್ರ.ಸಂ | ಕಲಿಕಾಫಲಗಳು |
| --- | --- |
| 1. | ತಮ್ಮ ಆಸುಪಾಸಿನಲ್ಲಿ ಸಂಭವಿಸುವ ವಿವಿಧ ಘಟನೆಗಳ, ಅಂಶಗಳ ಬಗ್ಗೆ ಗಮನಹರಿಸುತ್ತಾ ಮತ್ತು ಆಲಿಸಿದ ಸಾಹಿತ್ಯಗಳ (ಹಾಸ್ಯ, ಸಾಹಸ, ಸಾಮಾಜಿಕ, ಮುಂತಾದ ವಿಷಯಗಳನ್ನು ಆಧರಿಸಿದ ಕಥೆ, ಕವಿತೆ ಮುಂತಾದವುಗಳು) ವಿಷಯವಸ್ತು, ಘಟನೆಗಳು, ಚಿತ್ರಗಳು, ಪಾತ್ರಗಳು, ಶಿರೋನಾಮೆಗಳು ಬಗ್ಗೆ ಮಾತನಾಡುತ್ತಾರೆ, ಪ್ರಶ್ನಿಸುತ್ತಾರೆ, ಸ್ವತಃ ಟಿಪ್ಪಣಿ ನೀಡುತ್ತಾರೆ. ತಮ್ಮ ಮಾತಿಗೆ ತರ್ಕ ಮಾಡುತ್ತಾರೆ, ತಾರ್ಕಿಕವಾಗಿ ಚಿಂತಿಸಿ, ಚರ್ಚಿಸಿ, ನಿರ್ಣಯಕ್ಕೆ ಬರುತ್ತಾರೆ. |
| 2 | ತಮ್ಮ ಪಠ್ಯ ಪುಸ್ತಕದ ಹೊರತಾಗಿ ಬೇರೆ ವಿಷಯ ಸಾಮಗ್ರಿಗಳನ್ನು ಸಮಾಚಾರ ಪತ್ರಿಕೆ, ಬಾಲ ಪತ್ರಿಕೆ ಮುಂತಾದವು ಓದಿ ತಿಳಿಯುತ್ತಾರೆ ಮತ್ತು ಅವುಗಳ ಬಗ್ಗೆ ಮಾತನಾಡುತ್ತಾರೆ ಮತ್ತು ಚರ್ಚಿಸುತ್ತಾರೆ. |
| 3 | ವಿವಿಧ ರೀತಿಯ ವಿಷಯ ಸಾಮಗ್ರಿಗಳಲ್ಲಿ ವೃತ್ತಪತ್ರಿಕೆ, ಬಾಲಪತ್ರಿಕೆ, ಮಕ್ಕಳಸಾಹಿತ್ಯ, ಪೋಸ್ಟರ್ ಇತ್ಯಾದಿಗಳಲ್ಲಿ ಕಂಡುಬರುವ ಸಂವೇದನಾಶೀಲ ಅಂಶಗಳನ್ನು ಗುರುತಿಸಿ ತನ್ನ ಮಾತಿನಲ್ಲಿ, ಬರೆಹದಲ್ಲಿ ವ್ಯಕ್ತಪಡಿಸುತ್ತಾರೆ. |
| 4 | ವಿವಿಧ ಪರಿಸ್ಥಿತಿ ಮತ್ತು ಉದ್ದೇಶಗಳಿಗಾಗಿ ಬೋರ್ಡ್ ಮೇಲೆ ಬರೆದ ಸೂಚನೆ, ಕಾರ್ಯಕ್ರಮದ ವರದಿ, ಪತ್ರ ಮುಂತಾದವುಗಳನ್ನು ತಿಳಿದುಕೊಳ್ಳುವ ಉದ್ದೇಶದಿಂದ ಓದಿ ನಕಲು ಮಾಡುತ್ತಾರೆ. ಮತ್ತು ಬೇರೆಬೇರೆ ಪರಿಸರ ಮತ್ತು ಉದ್ದೇಶಗಳಿಗಾಗಿ (ಸೂಚನಾ ಫಲಕದಲ್ಲಿ ಹಾಕಿರುವ ಕಾರ್ಯಕ್ರಮಗಳ ಪಟ್ಟಿ ಜ್ಞಾನ ಪಡೆದುಕೊಳ್ಳಲು) ಓದುತ್ತಾರೆ ಮತ್ತು ಬರೆಯುತ್ತಾರೆ. |
| 5 | ಸ್ವ ಇಚ್ಛೆಯಿಂದ ಅಥವಾ ಶಿಕ್ಷಕರಿಂದ ನಿರ್ಧರಿಸಿದ ಚಟುವಟಿಕೆಗಳಲ್ಲಿ ಬರವಣಿಗೆ ಪ್ರಕ್ರಿಯೆಗಳ ಬಗ್ಗೆ ತಿಳಿದು ತಮ್ಮ ಬರವಣಿಗೆಯನ್ನು ಉತ್ಕೃಷ್ಟಗಳಿಸಿಕೊಳ್ಳುತ್ತಾರೆ. ಬರವಣಿಗೆಯ ಉದ್ದೇಶ ಮತ್ತು ಓದುಗನಿಗೆ ಅನುಸಾರವಾಗಿ ತಮ್ಮ ಬರವಣಿಗೆಯಲ್ಲಿ ಪರಿವರ್ತನೆ ಮಾಡುತ್ತಾರೆ. ಉದಾಹರಣೆಗೆ ಯಾವುದಾದರೊಂದು ಘಟನೆಯ ಬಗ್ಗೆ ತಿಳಿಸಲು ಮತ್ತು ಸ್ನೇಹಿತರಿಗೆ ಪತ್ರ ಬರೆಯುವುದು. |

# ಕಲಿಕಾ ಚೇತರಿಕೆ 2022–23

# ನೈದಾನಿಕ ಅವಲೋಕನ–ಕಲಿಕಾಂಶಗಳು

**ತರಗತಿ:7** **ವಿಷಯ:–ಕನ್ನಡ**

| ಕ್ರ.ಸಂ | ಕಲಿಕಾಫಲಗಳು |
|---|---|
| **1.** | ಆಲಿಸಿದ ಅಥವಾ ನೋಡಿದ ವಿಷಯಗಳ ಬಗೆಗೆ (ಉದಾಹರಣೆಗೆ ಸ್ಥಳೀಯ ಸಾಮಾಜಿಕ ಘಟನೆಗಳು, ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು) ಸಂಕೋಚವಿಲ್ಲದೆ ಮಾತನಾಡುತ್ತಾರೆ ಮತ್ತು ಪ್ರಶ್ನೆಮಾಡುತ್ತಾರೆ. |
| **2** | ರೇಡಿಯೊ, ಟಿವಿ, ಸುದ್ದಿಪತ್ರಿಕೆ, ಅಂತರ್ಜಾಲಗಳಲ್ಲಿ ನೋಡಿದ ಇಲ್ಲವೆ ಆಲಿಸಿದ ಸುದ್ದಿಗಳನ್ನು ತಮ್ಮದೇ ಮಾತುಗಳಲ್ಲಿ ಹೇಳುತ್ತಾರೆ. |
| **3** | ಕನ್ನಡ ಭಾಷೆಯ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಬರೆದಿರುವ ಸಾಹಿತ್ಯ ಸಾಮಗ್ರಿಗಳನ್ನು ಸೂಕ್ತ ಏರಿಳಿತ ಮತ್ತು ಸರಿಯಾದ ಗತಿಯಲ್ಲಿ ಓದುತ್ತಾರೆ. |
| **4** | ಭಾಷೆಯ ಸೂಕ್ಷ್ಮತೆ, ವ್ಯವಸ್ಥೆ, ಶೈಲಿಗಳ ಬಗೆಗೆ ಗಮನಕೊಡುತ್ತಾ ಅವುಗಳನ್ನು ಮೆಚ್ಚಿಕೊಳ್ಳುತ್ತಾರೆ. ಉದಾಹರಣೆಗೆ: ಕವಿತೆಯೊಳಗಿನ ಪ್ರಾಸ, ಲಯ, ಛಂದಸ್ಸು, ಹಾಗೆ ಕತೆ, ಪ್ರಬಂಧಗಳಲ್ಲಿ ಬಳಕೆಯಾದ ನುಡಿಗಟ್ಟು, ಗಾದೆಮಾತು, ಇತ್ಯಾದಿ |
| **5** | ತನ್ನದಕ್ಕಿಂತ ಭಿನ್ನ ಭಾಷೆ, ಊಟಉಪಚಾರ, ವೇಷಭೂಷಣಗಳ ವೈಶಿಷ್ಟತೆಗಳಿಗೆ ಸಂಬಂಧಿಸಿದಂತೆ ಮಾತುಕತೆ ನಡೆಸುತ್ತಾರೆ |
| **6** | ತಮ್ಮ ಪರಿಸರದಲ್ಲಿರುವ ವಿವಿಧ ಜನಪದ ಕಥೆ ಮತ್ತು ಗೀತೆಗಳ ಬಗೆಗೆ ತಿಳಿದುಕೊಳ್ಳುತ್ತ ಚರ್ಚಿಸುತ್ತಾರೆ |
| **7** | ಕನ್ನಡ ಭಾಷೆಯಲ್ಲಿ ಸಿಗುವ ವಿವಿಧ ಪ್ರಕಾರದ ವಿಷಯ ಸಾಮಗ್ರಿ (ಉದಾ: ಸುದ್ದಿಪತ್ರ, ಸಮಾಚಾರ ಪತ್ರಿಕೆಗಳ ಶೀರ್ಷಿಕೆ, ಮಕ್ಕಳ ಸಾಹಿತ್ಯ, ತಿಳುವಳಿಕೆ ಪತ್ರ, ಅಂತರ್ಜಾಲದ ಸುದ್ದಿಗಳು ಇತ್ಯಾದಿ)ಗಳಲ್ಲಿ ಬಂದಿರುವ ಪ್ರಾಕೃತಿಕ, ಸಾಮಾಜಿಕ ಮತ್ತು ಇತರೆ ಸಂವೇದನಶೀಲ ಅಂಶಗಳ ಬಗ್ಗೆ ಓದಿ ತಿಳಿಯುತ್ತಾರೆ ಮತ್ತು ಅವುಗಳ ಬಗ್ಗೆ ನಿರರ್ಗಳವಾಗಿ ಮಾತನಾಡುತ್ತಾರೆ ಮತ್ತು ಚರ್ಚಿಸುತ್ತಾರೆ.<br>ಆಲಿಸಿದ ಮೌಖಿಕ ಸೂಚನೆಗಳ ಸರಣಿಯನ್ನು ಅರ್ಥಮಾಡಿಕೊಂಡು ಕಾರ್ಯ ರೂಪಕ್ಕೆ ತರುತ್ತಾರೆ ಅವುಗಳ ಬಗ್ಗೆ ತಮ್ಮ ಆಸಕ್ತಿ ಇಷ್ಟಪಡಲು ಕಾರಣ ಮತ್ತು ಅವುಗಳ ಬಗೆಗೆ ಅಭಿಪ್ರಾಯ ಹೇಳುತ್ತಾರೆ.<br>ಟಿಪ್ಪಣಿ ಬರೆಯುತ್ತಾರೆ/ಬ್ರೈಲ್ ಲಿಪಿಯಲ್ಲಿ ಬರೆಯುತ್ತಾರೆ.<br>ವಿವಿಧ ಸಂದರ್ಭಗಳಲ್ಲಿ, ವಿವಿಧ ಉದ್ದೇಶಗಳಿಗಾಗಿ ಬರೆಯುವ, ವಿವಿಧ ವಿಷಯ ಲೇಖನಗಳಲ್ಲಿ ಸೂಕ್ತವಾದ ಶಬ್ದಗಳನ್ನೂ, ನುಡಿಗಟ್ಟುಗಳನ್ನೂ ಹಾಗೂ ವಾಕ್ಯರಚನೆಗಳನ್ನು ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ ಪ್ರಯೋಗಿಸುತ್ತಾರೆ. |
| **8** | ಹೊಸ ಪದಪ್ರಯೋಗಗಳ ಬಗೆಗೆ ಜಿಜ್ಞಾಸೆ ಮಾಡುತ್ತಾರೆ ಮತ್ತು ಅವುಗಳ ಅರ್ಥ ಹುಡುಕುವುದಕ್ಕೆ ಶಬ್ದಕೋಶದ ಉಪಯೋಗ ಮಾಡುತ್ತಾರೆ |

# ಕಲಿಕಾ ಚೇತರಿಕೆ 2022–23

# ನೈದಾನಿಕ ಅವಲೋಕನ–ಕಲಿಕಾಫಲಗಳು

**ತರಗತಿ:8** **ವಿಷಯ:–ಕನ್ನಡ**

| ಕ್ರ.ಸಂ | ಕಲಿಕಾಫಲಗಳು |
|---|---|
| 1. | ತಾವು ಕಂಡ ಚಿತ್ರ ಘಟನೆ, ಸನ್ನಿವೇಶ, ಚಿತ್ರ ಸರಣಿ ಅಥವಾ ದೃಶ್ಯವನ್ನು ಕುರಿತು ಪಡೆದ ಅನುಭವಗಳನ್ನು ತಮ್ಮ ಸೃಜನಾತ್ಮಕತೆಯೊಂದಿಗೆ ಮೌಖಿಕ, ಲಿಖಿತ ಹಾಗೂ ಆಂಗಿಕವಾಗಿ ವ್ಯಕ್ತಪಡಿಸುತ್ತಾರೆ. |
| 2 | ಸ್ಥಳೀಯ ಸಾಮಾಜಿಕ ಮತ್ತು ಪ್ರಾಕೃತಿಕ ಸನ್ನಿವೇಶದಲ್ಲಿನ ಅಂಶಗಳನ್ನು ವಿಶ್ಲೇಷಿಸಿ, ತಾರ್ಕಿಕವಾಗಿ ಉತ್ತರಿಸುತ್ತಾರೆ. ಉದಾ: ವರದಕ್ಷಿಣೆಯ ಪರಿಣಾಮಗಳು, ಧೂಮಪಾನದಿಂದಾಗುವ ದುಷ್ಪರಿಣಾಮಗಳು. |
| 3 | ಕಥೆ–ಕವನಗಳನ್ನು ಓದಿ ಅವುಗಳಲ್ಲಿನ ಬರೆವಣಿಗೆ ಶೈಲಿಗಳನ್ನು ಗುರುತಿಸುತ್ತಾರೆ. ಉದಾ: ವರ್ಣನಾತ್ಮಕ, ಭಾವನಾತ್ಮಕ. |
| 4 | ಸಂವೇದನಾತ್ಮಕ ಅಂಶಗಳಾದ ಜಾತಿ, ಧರ್ಮ, ಲಿಂಗ, ಆಚಾರ, ವಿಚಾರ, ರೂಢಿ, ಸಂಪ್ರದಾಯ, ಉಡುಗೆ, ತೊಡುಗೆ ಮೊದಲಾದ ಅಂಶಗಳ ಬಗ್ಗೆ ಅನುಭವವನ್ನು ಮೌಖಿಕವಾಗಿ ಅಭಿವ್ಯಕ್ತಪಡಿಸುತ್ತಾರೆ. ಪಠ್ಯದಲ್ಲಿನ ಸಾಹಿತ್ಯ ಓದಿ ಅದರ ಉಪಯೋಗದ ಬಗ್ಗೆ ಮಾತನಾಡುತ್ತಾರೆ. |
| 5 | ಸೂಕ್ತ ಲೇಖನ ಚಿಹ್ನೆಯೊಂದಿಗೆ ವಾಕ್ಯಗಳು, ನುಡಿಗಟ್ಟುಗಳು, ನಾಣ್ಣುಡಿಗಳು, ಕಾಲ, ಒಗಟು ಮತ್ತು ಲಿಂಗ ಮೊದಲಾದ ವ್ಯಾಕರಣಾಂಶಗಳ ಪ್ರಯೋಗ ಮಾಡುತ್ತಾರೆ ಮತ್ತು ಮಹತ್ವ ಅರ್ಥೈಸಿಕೊಂಡು ಪ್ರಶಂಸಿಸುತ್ತಾರೆ. |
| 6 | ಸಂವೇದನಾತ್ಮಕ ಅಂಶಗಳನ್ನು ಕುರಿತು ತಾರ್ಕಿಕ ಅಭಿಪ್ರಾಯವನ್ನು ಬರವಣಿಗೆಯ ಮೂಲಕ ಅಭಿವ್ಯಕ್ತಪಡಿಸುತ್ತಾರೆ ಹಾಗೂ ಭಿತ್ತಿಪತ್ರಿಕೆ/ಪತ್ರಿಕಾ ತುಣುಕುಗಳನ್ನು ಸಂಗ್ರಹಿಸಿ ಅವುಗಳಿಗೆ ವಿಶ್ಲೇಷಣೆ ಬರೆದು ಸಂಪಾದಿಸುತ್ತಾರೆ. |

# ಕಲಿಕಾ ಚೇತರಿಕೆ 2022–23

## ನೈದಾನಿಕ ಅವಲೋಕನ ನಮೂನೆ

ತರಗತಿ:

ವಿಷಯ: ಕನ್ನಡ

| ಕ್ರ.ಸಂ | ವಿದ್ಯಾರ್ಥಿಗಳ ಹೆಸರು | ಕಲಿಕಾಫಲಗಳು | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | 1 | | 2 | | 3 | | 4 | | 5 | | 6 | | 7 | | 8 | | 9 | | 10 | | ಒಟ್ಟು | | ಶ್ರೇಣಿ |
| | | ಗಳಿಸಿದೆ | ಗಳಿಸಿಲ್ಲ | ಗಳಿಸಿದೆ | ಗಳಿಸಿಲ್ಲ | ಗಳಿಸಿದೆ | ಗಳಿಸಿಲ್ಲ | ಗಳಿಸಿದೆ | ಗಳಿಸಿಲ್ಲ | ಗಳಿಸಿದೆ | ಗಳಿಸಿಲ್ಲ | ಗಳಿಸಿದೆ | ಗಳಿಸಿಲ್ಲ | ಗಳಿಸಿದೆ | ಗಳಿಸಿಲ್ಲ | ಗಳಿಸಿದೆ | ಗಳಿಸಿಲ್ಲ | ಗಳಿಸಿದೆ | ಗಳಿಸಿಲ್ಲ | ಗಳಿಸಿದೆ | ಗಳಿಸಿಲ್ಲ | ಗಳಿಸಿದೆ | ಗಳಿಸಿಲ್ಲ | A/B |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |
| | | | | | | | | | | | | | | | | | | | | | | | | |

ಸೂಚನೆ:ಕನ್ನಡ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ತರಗತಿಗಳಿಗೂ ಇದೇ ನಮೂನೆಯನ್ನು ಬಳಸಿ ಅವಲೋಕನ ಮಾಡುವುದು